(ಇ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು): ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ 41ನೇ ಪಟ್ಟಿಯಲ್ಲಿರುವ 33 ಪ್ರಶ್ನೆಗಳ ಪೈಕಿ 29 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅನುಬಂಧ-II

ಅಧ್ಯಕ್ಷರು : ಮಂಡಿಸಲಾಯಿತು.

9. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ಲಿಖಿತ ಮೂಲಕ ಉತ್ತರಗಳು ಬರುತ್ತಿಲ್ಲ ಎನ್ನುವುದರ ಬಗ್ಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಲಿಖಿತ ಮೂಲಕ ಕೊಡುವ ಉತ್ತರಗಳ ಬಗ್ಗೆ ಇವತ್ತು ಆಯಿತು. ಪ್ರತಿನಿತ್ಯ ಶೇಕಡ 60–70 ರಷ್ಟು ಪ್ರಶ್ನೆಗಳಿಗೆ ನಮಗೆ ಉತ್ತರಗಳು ಬಂದಿಲ್ಲ. ಎಲ್ಲರಿಗೂ ಇದರ ಬಗ್ಗೆ ಹೇಳಿ ನಮಗೆಲ್ಲರಿಗೂ ಉತ್ತರಗಳನ್ನು ಕೊಡಿಸುವ ವ್ಯವಸ್ಥೆಯನ್ನು ಮಾಡುವುದಾಗಿ ತಾವೂ ಸಹ ಭರವಸೆಯನ್ನು ಕೊಟ್ಟಿದ್ದೀರಿ. ಈಗ ತಾವು ತೆಗೆದು ನೋಡಿ, ಈಗ ಲಿಖಿತ ಮೂಲಕ ಎಷ್ಟರಮಟ್ಟಿಗೆ ನಮಗೆ ಉತ್ತರಗಳು ಬಂದಿವೆ. ಅದನ್ನು ಯಾರು ಚೆಕ್ ಮಾಡುವವರು, ನೋಡುವವರು ಯಾರು? ಇವತ್ತಿನ ದಿವಸವನ್ನೇ ಉದಾಹರಣೆಗೆ ತೆಗೆದುಕೊಳ್ಳಿ. ಎಲ್ಲಿದೆ ಉತ್ತರ?

ಶ್ರೀ ಹೆಚ್.ಕೆ. ಪಾಟೀಲ್ : 33 ಪ್ರಶ್ನೆಗಳ ಪೈಕಿ 29 ಪ್ರಶ್ನೆಗಳಿಗೆ ಉತ್ತರ ಕೊಡಲಾಗಿದೆ, ನಾಲ್ಕು ಮಾತ್ರ ಉಳಿದಿದೆ. ಇದನ್ನು ಸಬ್ಸಿಕ್ವೆಂಟ್ ಆಗಿ ....

ಶ್ರೀ ಬಿ.ಎಸ್. ಯಡಿಯೂರಪ್ಪ : ಮೊದಲು ಶೇ. 90 ರಷ್ಟು ಉತ್ತರಗಳು ಬರುತ್ತಿದ್ದವು. ಈಗ ಅದರ ಮಹತ್ವವನ್ನೇ ಕಳೆದುಕೊಂಡಿದೆ.

ಶ್ರೀ ಹೆಚ್.ಡಿ. ಬಸವರಾಜ್ : ನಮ್ಮ ಪ್ರಶ್ನೆಗಳಿಗೆ ಉತ್ತರಗಳನ್ನು ಎಲ್ಲಿ ಕೊಟ್ಟಿದ್ದಾರೆ.

(ಗೊಂದಲ)

ಅಧ್ಯಕ್ಷರು : ಯಡಿಯೂರಪ್ಪನವರೇ, ಈಗ ಸೆಕ್ರೆಟರಿಯೇಟ್‌ನಲ್ಲಿ ಪರಿಶೀಲಿಸಿ, ಕೆಲವನ್ನು ಒದಗಿಸಿದ್ದೇವೆ. ಯಾವ್ಯಾವ ಇಲಾಖೆಗಳಿಂದ ಉತ್ತರ ಬಂದಿಲ್ಲ ಎಂಬುದನ್ನು ನೋಡೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮ ಸಿಬ್ಬಂದಿ ಇದನ್ನು ಮಾಡಬೇಕು. ಎಷ್ಟು ಉತ್ತರಗಳು ಬಂದಿವೆ, ಉಳಿದವು ಏಕೆ ಬರಲಿಲ್ಲ, ಏಕೆ ಬರುತ್ತಿಲ್ಲ ಎಂದು ಇದನ್ನು ಯಾರು ಫಾಲೋ ಅಪ್ ಮಾಡುತ್ತಿದ್ದಾರೆ? ನಾವು ಕೇಳುವ ಪ್ರಶ್ನೆಗಳಿಗೆ ಒಂದು ಮಹತ್ವವಿದೆಯೆಲ್ಲವೇ? ಎಷ್ಟೊಂದು ಪ್ರಮುಖವಾದ ವಿಷಯಗಳಿಗೆ ನಮಗೆ ಇನ್‌ಫಾರ್ಮೇಷನ್ ಬೇಕು ಎಂದು ಕಳಿಸಿದರೆ ಅದಕ್ಕೆ ಉತ್ತರವೇ ಬರುವುದಿಲ್ಲ ಎಂದರೆ ಹೇಗೆ?

ಅಧ್ಯಕ್ಷರು : ಯಾವ್ಯಾವ ಇಲಾಖೆಯಿಂದ ಉತ್ತರ ಬಂದಿದೆ, ಉತ್ತರಗಳು ಬಂದಿಲ್ಲ ಎನ್ನುವುದನ್ನು ನೋಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬಹುತೇಕ ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ. ಯಾವ್ಯಾವ ಪ್ರಶ್ನೆಗಳಿಗೆ ಉತ್ತರ ಬಂದಿದೆಯೆಂದು ನೀವೇ ಹೇಳಿ.

ಶ್ರೀ ಹೆಚ್.ಕೆ. ಪಾಟೀಲ್ : ಇದುವರೆಗೆ ಯಾವ ಉತ್ತರಗಳು ಬಂದಿಲ್ಲ. ಅವುಗಳಿಗೆ ಇನ್ನು 15 ದಿವಸಗಳೊಳಗೆ ಸಂಬಂಧಪಟ್ಟ ಸದಸ್ಯರಿಗೆ ಕಳುಹಿಸುವ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಆರಗ ಜ್ಞಾನೇಂದ್ರ : ಕಳೆದ ಅಧಿವೇಶನದಲ್ಲಿ ಸಹ ಉಪ ಮುಖ್ಯಮಂತ್ರಿಗಳು ನನಗೆ ಮನೆಗೆ ಉತ್ತರವನ್ನು ಕಳುಹಿಸುತ್ತೇವೆಂದು ಹೇಳಿದ್ದರು, ಮೂರು ತಿಂಗಳಾಯಿತು, ಆದರೆ ಇದುವರೆಗೂ ಕೂಡ ಉತ್ತರಗಳು ಬಂದಿಲ್ಲ.

ಮಾನ್ಯ ಸದಸ್ಯರು : ಈಗ ಮಂಡನೆ ಮಾಡಿದ ಪ್ರಶ್ನೆಗಳಿಗೂ ಉತ್ತರ ಬಂದಿಲ್ಲ.

ಶ್ರೀ ಹೆಚ್.ಕೆ. ಪಾಟೀಲ್ : ಈ ಸದನದಲ್ಲಿ ಬಾಕಿ ಉಳಿದಿರುವ ಪ್ರಶ್ನೆಗಳಿಗೆ, ಯಾವುದು ಲಿಖಿತ ಮೂಲಕ ಉತ್ತರಗಳನ್ನು ಕೊಡಬೇಕಾಗಿತ್ತು. ಅವುಗಳಿಗೆ ಇನ್ನು ಹದಿನೈದು ದಿವಸಗಳೊಳಗೆ ಕಳುಹಿಸುವ ವ್ಯವಸ್ಥೆಯನ್ನು ಮಾಡುತ್ತೇವೆ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ : ಉದಾಹರಣೆ ಒಂದು ಹೇಳುತ್ತೇನೆ, ನಾನು ಸಿ.ಎ.ಜಿ. ರಿಪೋರ್ಟ್ ಪ್ರಕಾರ ಐದು ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಮಿಸ್‌ಅಪ್ರೊಪ್ರಿಯೇಷನ್ ಆಗಿರುವಂತಹ ಇಲಾಖೆ ಮತ್ತು ಇಲಾಖಾಧಿಕಾರಿಗಳ ಪಟ್ಟಿ ಕೇಳಿದ್ದೇನೆ. ಹಿಂದಿನ ಅಧಿವೇಶನದಲ್ಲಿಯೂ ಕೇಳಿದ್ದೆ. ಈ ಅಧಿವೇಶನದಲ್ಲಿಯೂ ಕೇಳಿದ್ದೇನೆ, ಆದರೂ ಕೊಟ್ಟಿಲ್ಲ, ಏಕೆಂದರೆ ಇರುಸು ಮುರುಸಿಗೆ ಒಳಗಾಗುತ್ತೇವೆಂದು ಇಂತಹ ಪ್ರಶ್ನೆಗಳಿಗೆ ಉತ್ತರ ಕೊಡದೆ ತಪ್ಪಿಸಿಕೊಳ್ಳುವ ವ್ಯವಸ್ಥಿತವಾದಂಥ ಪ್ರಯತ್ನವನ್ನು ಸರ್ಕಾರದ ಕೆಲವು ಇಲಾಖೆಗಳ ಕಡೆಯಿಂದ ನಡೆಯುತ್ತಿದೆ. ಹಾಗಾಗಿ ನಾವು; ಕೇಳುವ ಪ್ರಶ್ನೆಗಳಿಗೆ ಉತ್ತರವನ್ನು ಕೊಡಿಸದಿದ್ದರೆ ನಮ್ಮಂಥ ಶಾಸಕರುಗಳು ಪ್ರಶ್ನೆಗಳನ್ನು ಕೇಳುವ ಉದ್ದೇಶ ವಿಫಲವಾಗುತ್ತದೆ. ಅವರು ತಮ್ಮ ಇಲಾಖೆಯನ್ನೂ ಸರಿಮಾಡಿಕೊಳ್ಳುವುದಿಲ್ಲ. ನಮ್ಮ ಪ್ರಶ್ನೆಗಳಿಗೂ ಉತ್ತರಗಳು ಬರುವುದಿಲ್ಲ.

ಶ್ರೀ ಹೆಚ್.ಡಿ. ಬಸವರಾಜು : ನಾವು ಇಲ್ಲಿ ಪ್ರಶ್ನೆಗಳನ್ನು ಕೇಳಿದಾಗ ಅಧಿಕಾರಿಗಳು ನಮಗೆ ಉತ್ತರವನ್ನು ಕೊಡುವುದಿಲ್ಲ ವಿಧಾನಸಭೆಯಲ್ಲಿ ಉತ್ತರಗಳನ್ನು ತಲುಪಿಸುವ ವ್ಯವಸ್ಥೆಯ ಜವಾಬ್ದಾರಿಯನ್ನು ತೆಗೆದುಕೊಂಡಿರುವಂತಹ ಅಧಿಕಾರಿಗಳು ಸಹ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಹಾಗಿದ್ದರೆ ನಾವು ಏತಕ್ಕೆ ಪ್ರಶ್ನೆಯನ್ನು ಕೇಳಬೇಕು?

ಒಬ್ಬರು ಮಾನ್ಯ ಸದಸ್ಯರು : ಕಳೆದ ಅಧಿವೇಶನದ ಪ್ರಶ್ನೆಗಳಿಗೂ ಉತ್ತರ ಬಂದಿಲ್ಲ.

ಅಧ್ಯಕ್ಷರು : ಆಯಿತು. ಯಾವ್ಯಾವ ಇಲಾಖೆಗಳಿಂದ ಉತ್ತರ ಬಂದಿಲ್ಲ ಎನ್ನುವುದನ್ನು ನೋಡಿ ಮತ್ತೆ ಮಾನ್ಯ ಮಂತ್ರಿಗಳು ಹೇಳಿದ ಹಾಗೆ 15 ದಿವಸದೊಳಗೆ ಉತ್ತರಗಳನ್ನು ಕಳುಹಿಸುವ ವ್ಯವಸ್ಥೆಯನ್ನು ನಾವು ಮಾಡುತ್ತೇವೆ.

(ಗೊಂದಲ)

ಅಧ್ಯಕ್ಷರು : ಈಗ ಒಂದು ವಿಧೇಯಕವಿದೆ.